# <u>ದಾರಿಯ ತೋರೊ ಮುಕುಂದ</u>

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 114.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 281.
3. **Note:** This song is not available in the book of Prof. S.K. Ramachandra Rao.
4. **Note:** Lyrics given here are as per Ref. 1. The wordings in Ref. 2 are slightly different and are given in yellow highlights. Wordings in Ref. 1 seems to be more correct. But the singers have followed lyrics as in Ref. 2.
5. **Note:** Singer has followed lyrics as in Ref. 2.

| | |
|---|---|
| ರಾಗ: ಪೂರ್ವಿ ತಾಳ: ಏಕ | ರಾಗ: ಪೂರ್ವಿ ತಾಳ: ಏಕ |
| | |
| ದಾರಿಯ ತೋರೊ ಮುಕುಂದ ಹರಿ- | ದಾರಿಯ ತೋರೊ ಮುಕುಂದ |
| ನಾರಾಯಣ ಗೋವಿಂದ ॥ ಪ ॥ | ನಾರಾಯಣ ಹರಿ ಗೋವಿಂದ |
| | |
| ಬಂದೆನು ಬಹು ಜ್ಮನದಲಿ – ನಾ | ಬಂದೆನು ನಾನಾ ಜನ್ಮದಲಿ, ಬಹು |
| ಬಂಧನದೊಳು ಸಿಲುಕುತಲಿ | ಬಂಧನದೊಳು ಸಿಲುಕಿದೆನೊ |
| ಮುಂದಿನದಾವುದು ಪಯಣ – ತೋರೊ | ಮುಂದಿನ ಪಯಣದ ಗತಿಯೇನೊ, |
| ಇಂದುನೀ ಇಂದಿರೆರಮಣ ॥ 1 ॥ | ಇಂದು ನೀ ತೋರೋ ಇಂದಿರೆ ರಮಣನೆ |
| | |
| ಗತಿಯಿಲ್ಲದವರಿಗೆ ನೀನೆ – ಸದ್ - | ಉಕ್ಕಿ ಹರಿವ ನದಿಯೊಳಗೆ ನಾ |
| ಗತಿಯೆಂದು ಸ್ತುತಿ ಮಾಡಿದೆನೊ | ಸಿಕ್ಕಿದೆ ನಡು ನೀರೊಳಗೆ |
| ಗತಿಯೆಂದು ನಂಬಿದೆ ನಿನ್ನ | ಕಕ್ಕುಲತೆಯಿಲ್ಲ ನಿನಗೆ ಬೇಗ, |
| ಸತುವ ತೋರು ನರಹರಿಯೆ ಗೋವಿಂದ ॥ 2 ॥ | ನೀ ಕೈ ಪಿಡಿದೆನ್ನ ಸಲಹಯ್ಯ ಬಿಡದೆ |
| | |
| ಮಡವಿನೊಳಗೆ ಧಮುಕಿದೆನೆ -ಇನ್ನು | ಕುಕ್ಷಿಯೊಳಗೆ ನೀ ಬಿಟ್ಟು, |
| ಕಡಹಾಯಿಸುವರ ನಾ ಕಾಣೆ | ಅಯ್ಯ, ಯಾರಿಗೆ ಉಸಿರುವೆನೊ |
| ಹಡೆದ ತಾಯಿ - ತಂದೆ ನೀನೆ -ಕೈ | ಚಿಂತಿತದಾಯಕ ಕೇಳೊ, ನಮ್ಮ |
| ಹಿಡಿದು ಸಲಹೊ ಎನ್ನೊಡೆಯ ಮುರಾರಿ ॥ 3 ॥ | ಪುರಂದರ ವಿಠಲನೆ ದಯಮಾಡೋ |

ಮಿಕ್ಕಿ ಬರುವ ಹೊಳೆಯೊಳಗೆ -ನಾನು
ಸಿಕ್ಕಿದೆ ನಡುನೀರೊಳಗೆ
ಕಕ್ಕುಲಾತಿ ನಿನಗಿರದೆ

ಭಕ್ತವತ್ಸಲ ನೀ ದಯಮಾಡೋ ॥ 4 ॥

ಕುಕ್ಷಿಯೊಳಗೆ ಇಂಬಿಟ್ಟು -ಎನ್ನ
ರಕ್ಷಿಸಿ ಸಲಹಬೇಕು
ಅಕ್ಷಯ ಅನಂತ ಮಹಿಮನೆ - ನೀನು
ಪಕ್ಷಿವಾಹನನೆ ಪುರಂದರ ವಿಠಲ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಸತುವ** = ಸತ್ವ

**ಕುಕ್ಷಿ** = ಹೊಟ್ಟೆ

**ಇಂಬು** = ಉಳಕೊಳ್ಳುವ ಸ್ಥಳ, ಮನೆ

**Classification:** Keerthane
**Ankita:** purandara vittala
**Location:** NA
**Category:** vairagya, mukti marga
**Sub-Category:** dari, mukunda, janma, Vishnu, sadgati, Narasimha, govinda, tayi, tande, Krishna, nadi, niru, daya, bhakti, Akshaya, Ananta, udara
**Pravachana:** NA
**Explanation:** NA